# ಹಳೆ ಕಥೆ, ಹೊಸ ವರ್ಷನ್ನು...

■ ನಂದಿನಿ ವಿಶ್ವನಾಥ ಹೆದ್ದುರ್ಗ


ಚಿತ್ರ: ಶಶಿಧರ ಹಳೇಮನಿ

ಒಂದೂರಲ್ಲಿ ಒಂದ್ ಗಂಡು ಗುಬ್ಬಿ ಮತ್ತೆ ಒಂದ್ ಹೆಣ್‌ಗುಬ್ಬಿ ಪ್ರೀತಿಸಿ ಮದುವೆಯಾಗಿ ಚೆನ್ನಾಗಿ ಸಂಸಾರ ಮಾಡ್ತಿರ್ತವೆ. ಗಂಡು ಗುಬ್ಬಿಗೆ ತನ್ ಹೆಂಡತಿಯನ್ನು ಕಂಡರೆ ಬಹಳ ಬಹಳ ಪ್ರೀತಿ... ಯಾವಾಗಲೂ 'ಚಿನ್ನಾ... ರನ್ನಾ...' ಅಂತಲೇ ಅದು ಹೆಂಡತಿಯನ್ನು ಕರೆಯುವುದು.

ಹೆಣ್ಣು ಗುಬ್ಬಿಯೂ ಅಷ್ಟೇ... ಎಷ್ಟು ಚೆನ್ನಾಗಿ ಅಲಂಕಾರ ಮಾಡ್ಕೋತಾಳೆ. ಸಂಸಾರ ಮಾಡ್ತಾಳೆ. ಗಂಡನಿಗೆ ಶುಚಿ ರುಚಿಯಾಗಿ ಅಡುಗೆ ಮಾಡ್ತಾಳೆ.

ಇಬ್ರೂ ಸಂಸಾರಕ್ಕೆ ಕಾಳು ಕಡ್ಡಿ ಹುಳ ಹುಪ್ಪಡಿ ಸಂಪಾದನೆಗೆ ಅಂತ ಹೊರಗೆ ಹೋಗಿ ದುಡ್ಕೊಂಬರ್ತಾವೆ. ಪತಿ ಪತ್ನಿ ಇಬ್ರೂ ದುಡಿದು ಮನೆಯನ್ನು ಚಂದ ಇಟ್ಕೊಂಡಿರ್ತಾರೆ.

ಹೀಗೆ ಇರುವಾಗ ಹೆಣ್ಣು ಗುಬ್ಬಿ ಗರ್ಭಿಣಿ ಆಗ್ತಾಳೆ. ಆಗ, ಗಂಡು ಗುಬ್ಬಿ ತನ್ನ ಹೆಂಡತಿಗೆ ಸ್ವಲ್ಪವೂ ನೋವಾಗದಂತೆ ನೋಡಿಕ್ಕೊಳ್ಳುತ್ತೆ. ಹೆಂಡತಿಗೆ ಹೆಚ್ಚು ಆಯಾಸ ಆಗದ ಹಾಗೆ ಮನೆಕೆಲಸ, ಕಾಳುಕಡ್ಡಿ ತರುವ ಕೆಲಸ ಎಲ್ಲವನ್ನೂ ತಾನೇ ಮಾಡುತ್ತೆ.

ಹೆಣ್ಣುಗುಬ್ಬಿಗೆ ಡೆಲಿವರಿ ಆದ ಮೇಲೆ ಮೊಟ್ಟೆ ಇಟ್ಟು ಕಾವು ಕೊಟ್ಟು ಮರಿಗಳು ಒಂಚೂರು ರೆಕ್ಕೆ ಮೂಡೋವರೆಗೂ ಜೊತೆಗೇ ಇದ್ದು ಆಮೇಲೆ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಲಿ ಅಂತ ಹೆಂಡತಿಯನ್ನು ಹೆಚ್ಚು ದುಡಿಮೆಗೆ ಹಚ್ಚುವುದಿಲ್ಲ. ಹಂಗೆ ಕಂಡವರ ಕಣ್ಣು ಕುಕ್ಕುವ ಥರ ಸಂಸಾರ ನಿಭಾಯಿಸ್ತಿರ್ತವೆ. ಹೀಗೆ ಇರುವಾಗ ಮರಿಗಳು ಚೂರು ಗಟ್ಟಿಯಾಗ್ತವೆ.

ರೆಕ್ಕೆ ಸ್ವಲ್ಪ ಉದ್ದ ಬೆಳೆದು ಗೂಡಿನ ತುದಿ ಕುಳಿತು ಹೊರಗೆಲ್ಲಾ ನೋಡುವಷ್ಟು ಶಕ್ತಿವಂತರಾಗ್ತಾವೆ ಮರಿಗಳು. ಅಷ್ಟರಲ್ಲಿ ಹೆಣ್ಣುಗುಬ್ಬಿಗೆ ಮನೇಲೇ ಕೂತುಕೂತು ಬೋರಾಗ್ತದೆ. 'ನಾನೂ ಬರ್ತೀನ್ರೀ, ಹೊರಗೆ ಹೋಗಬರೋಣಾ' ಅನ್ನುತ್ತೆ ಒಂದಿನ.

ಗಂಡಿಗೂ ಒಂದೇ ಹಾರಾಡೋದು ಬೇಜಾರಾಗಿರುತ್ತೆ. 'ಮಕ್ಕಳಿಗೆಲ್ಲಾ ಹೊಂದ್ಸಿಟ್ಟು ಬಾ' ಅಂತ ಹೆಂಡತಿ ಜೊತೆ ಹೋಗೊ ತಯಾರಿ ಮಾಡಿಕೊಳ್ಳುತ್ತೆ ಗಂಡ.

ಎರಡೂ ಹಾರಾಡ್ಕೊಂಡು, ಸೈಟ್ ಸೀಯಿಂಗ್ ಮಾಡ್ಕೊಂಡು, ಪ್ರೀತಿ ಮಾಡ್ಕೊಂಡು ಪ್ರಾವಿಜನ್ಸ್ ತರೋಕೆ ಅಂತ ಹೋಗ್ತವೆ. ಅದೇ ಸಮಯ ನೋಡಿದ ಒಬ್ಬ ಬೇಟೆಗಾರ ಗೂಡಿನ ಬಳಿ ಬರ್ತಾನೆ. ಗೂಡಿನ ಕೆಳಗೆ ಅಗಲವಾಗಿ ಬಲೆ ಹಾಸ್ತಾನೆ. ಹಕ್ಕಿಯೋ ಮೊಲವೋ ಬಲೆಯೊಳಗೆ ಬೀಳಲಿ ಎನ್ನುವುದು ಅವನ ಉದ್ದೇಶ.

ಇತ್ತ ಮರದಲ್ಲಿದ್ದ ನಾಲ್ಕು ಮರಿಗಳಲ್ಲಿ ದೊಡ್ಡಣ್ಣ ಸ್ವಲ್ಪ ತುಂಟ. ಅದಕ್ಕೆ ಅಮ್ಮ ಇಲ್ಲದೆ ಬೇಸರ ಶುರುವಾಗಿ ಏನ್ ಮಾಡೋದು, ಏನ್ ಮಾಡೋದು ಅಂತ ಯೋಚಿಸುವಾಗ, ಹಾರುವುದನ್ನ ಕಲಿತು ಅಮ್ಮಂಗೆ ಅಚ್ಚರಿ ಮೂಡಿಸಬೇಕು, ವೆರಿಗುಡ್ ಪಾಪಚ್ಚಿ ಅನ್ನಿಸಿಕೊಳ್ಳಬೇಕು ಅಂತ ಅನ್ನಿಸಲಿಕ್ಕೆ ಶುರುವಾಗುತ್ತೆ.

ಆದರೆ...

ಮರದ ಕೆಳಗೆ ಹಂಟರ್ರು ಬಲೆ ಹಾಸಿ ಎಲ್ಲೋ ತಿರುಗಾಡ್ಲಿಕ್ಕೆ ಹೋಗಿದ್ದಾನೆ. ಚೂರುಚೂರೇ ರೆಕ್ಕೆ ಬಲಿತ ಪುಟಾಣಿ ಮರಿಗುಬ್ಬಿಗೆ ಇದೆಲ್ಲಾ ಹ್ಯಾಂಗ ತಿಳಿತದೆ? ತಾನು ಹಾರಾಡುವುದನ್ನು ಕಲಿತು ಒಂಚೂರು ಹುಳಹುಪ್ಪಡಿ ತಂದು ಅಮ್ಮನ ಹತ್ರ ಬೆಸ್ಟ್ ಅನಿಸ್ಕಳೊ ಆಸೇಲಿ ತನ್ನ ತಮ್ಮತಂಗಿಯರಿಗೇ 'ಬೈ..ಬೈ...ಹ್ಯಾಪಿ ಫ್ಲೈಯಿಂಗ್' ಅಂತ ಹೇಳಿ ಪುರ್ರ್ ಅಂತ ಹಾರಲಿಕ್ಕೆ ಹೋಗುತ್ತೆ.

ಬರೀ ಬಾಯಿಂದ ಸೌಂಡು ಬರುತ್ತೆ ಅಷ್ಟೆ. ರೆಕ್ಕೇಲಿ ಬಲ ಇಲ್ದೆ ಕೆಳಗೆ ಹಂಟರ್ ಹರಡಿರೋ ಬಲೇಲಿ ಬಿದ್ದೋಗಿಬಿಡುತ್ತೆ ಅಣ್ಣ ಗುಬ್ಬಿಮರಿ.

ಪುಟ್ಟಾಣಿ ಪುಟ್ಟ ನಮ್ಮ ಅಣ್ಣ ಗುಬ್ಬಿಮರಿ ಗೂಡೊಳಗಿನ ತರಲೆತುಂಟ, ಅಮ್ಮ ಹಾರುವುದನ್ನು ನೋಡಿ ನೋಡಿ ತನಗೂ ಹಾರಲು ಬರುತ್ತೆ ಅಂತಲೇ ತಿಳಿದುಕೊಂಡಿರುತ್ತೆ. ಆದರೆ ರೆಕ್ಕೆ ಬಿಚ್ಚಿದೊಡನೆ ಬ್ಯಾಲೆನ್ಸ್ ಮಾಡಲಿಕ್ಕೆ ಶಕ್ತಿ ಇಲ್ದೆ ಕೆಳಗೆ ಬಲೆಯೊಳಗೆ ಬಿದ್ದೋಗಿಬಿಡುತ್ತೆ.

ಅಯ್ಯಬ್ಬಾ...! ಭಯ ಆಗುತ್ತೆ ಅಣ್ಣಗುಬ್ಬಿಗೆ.

ಗಾಬರಿಯಾಗಿ, ಅಳು ಹಿಡಿದಿಟ್ಟು ಹೆಂಗೆಂಗೊ ಬಿಡಿಸ್ಕೊಳಕೆ ಟ್ರೈ ಮಾಡ್ತಾ, ಮಮ್ಮಿ ಹಿಂಗೆ ಅಲ್ವಾ ಹಾರಿ ಹೋಗುವುದು ಅಂತೆಲ್ಲಾ ತಲೆ ಕೆಡಿಸ್ಕೊಂಡು ಪ್ರಯತ್ನ ಪಟ್ರೂ ಆಗದೆ ಹೆದರಿಕೆ ಆಗಿ ಚಿಂವ್ವಾಚಿಂವ್ವಾ ಅಂತ ಜೋರಾಗಿ ಅಳಲಿಕ್ಕೆ ಶುರುಮಾಡುತ್ತೆ.

ತಮ್ಮ ತಂಗಿಯರೆಲ್ಲಾ ಏನಾಯ್ತು ಅಂತ ಇಣುಕಿ ನೋಡಿದ್ರೆ ಅಣ್ಣ ಅಳ್ತಾ ಇದಾನೆ. ಅವೂ ಅಳೋಕೆ ಶುರುಮಾಡ್ತವೆ.

ಅಷ್ಟೊತ್ತಿಗೆ ಅಪ್ಪ ಅಮ್ಮ ಪ್ರಾವಿಜನ್ಸ್ ತಗೊಂಡು, ಮಕ್ಕಳಿಗೆ ಗೊಂಬೆ, ಫ್ರಾಕು, ಚಡ್ಡಿ, ಹಗ್ಗೀಸ್ಸು, ಹಣ್ಣೂ ಅಂತೆಲ್ಲಾ ಬ್ಯಾಗು ತುಂಬಾ ಲಗ್ಗೇಜ್ ಇಟಕೊಂಡು ಬಂದ್ರೆ ಹಿರಿಮರಿ ಬಲೇಲಿ..!

ಅಮ್ಮನ ಜೀವವೇ ಹೋದ ಹಾಗಾಗುತ್ತೆ. ಕಂದಾ ಕಂದಾ ಅಂತ ಜೋರಾಗಿ ಅಳೋಕೆ ಶುರು ಮಾಡುತ್ತೆ. ಅಪ್ಪನಿಗೂ ಎದೆ ಒಡೆದು ಹೋದ ಹಾಗಾದ್ರೂ ಸ್ಥಿತಪ್ರಜ್ಞನಂತೆ ಏನೂ ಮಾಡಬಹುದು ಅಂತ ಉಪಾಯ ಹುಡ್ಕುತ್ತೆ.

ಈ ಕಡೆ ತನ್ನ ಪ್ರೀತಿಯ ಹೆಂಡತಿ 'ನನ್ನ ಮಗನ್ನ ಬದುಕಿಸ್ಕೊಡಿ' ಅಂತ ಗೋಳಾಡ್ತಿದೆ. ಹಿರಿಮರಿ ಬಲೆಯೊಳಗಿಂದ ಮಮ್ಮಿ ಅಪ್ಪ ಅಂತಾ ಜೋರಾಗಿ ಅಳ್ತಿರ್ತದೆ.